KARC410005942024

## ***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ ಮಾನವಿ***

***ಉಪಸ್ಥಿತರು*** ಃ ಶ್ರೀ. ಕಂಚಿ ಮಾಯಣ್ಣ ಗೌತಮ್,ಬಿ.ಎ.ಎಲ್;ಎಲ್.ಎಲ್.ಎಂ.
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ; ಮಾನವಿ.

***ದಿನಾಂಕ*** ಃ 3ನೇ ದಿವಸ ಆಗಸ್ಟ್ ಮಾಹೆ 2026.

***ಸಿ.ಸಿ. ನಂಃ 335/2024***

ಫಿರ್ಯಾದುದಾರರು ಃ ಸರ್ಕಾರದ ಪರವಾಗಿ ಸಿರವಾರ ಪೊಲೀಸರು.

ಃವಿಃ

***ಆರೋಪಿತರು*** ಃ ವಿರುಪಾಕ್ಷಯ್ಯ ತಂದೆ ಅಮರಯ್ಯ ಹಿರೇಮಠ,
35 ವರ್ಷ, ವ್ಯವಸಾಯ, ವಾಸಾಃ ಗಣದಿನ್ನಿ,
ತಾಲ್ಲೂಕು ಸಿರವಾರ, ಜಿಲ್ಲೆ ಃ ರಾಯಚೂರು

೧. ಅಪರಾಧ ನಡೆದ ದಿನಾಂಕ ಃ 30.12.2023
೨. ಅಪರಾಧ ವರದಿಯಾದ ದಿನಾಂಕ ಃ 31.12.2023
೩. ಫಿರ್ಯಾದುದಾರರ ಹೆಸರು ಃ ಶ್ರೀಮತಿ ಶಂಕ್ರಮ್ಮ
೪. ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ ಃ 19.09.2025
೫. ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿದ ದಿನಾಂಕಃ 16.07.2026
೬. ಆರೋಪಿಸಿರುವ ಅಪರಾಧಗಳು ಃ ಭಾ.ದಂ.ಸಂ. ಕಲಂ 504, 324, 325, 506 ಐ.ಪಿ.ಸಿ
೭. ನ್ಯಾಯಾಧೀಶರ ತೀರ್ಮಾನ ಃ ಆರೋಪಿರವರು ನಿರ್ದೋಷಿಯಾಗಿರುತ್ತಾರೆ.
೮. ಫಿರ್ಯಾದುದಾರರನ್ನು ಪ್ರತಿನಿಧಿಸಿದವರು ಃ ಸಹಾಯಕ ಸರ್ಕಾರಿ ಅಭಿಯೋಜಕರು

೯. ಆರೋಪಿಯನ್ನು ಪ್ರತಿನಿಧಿಸಿದವರು : ಶ್ರೀ. ಮಲ್ಲಿಕಾರ್ಜುನ ಪಾಟೇಲ್, ವಕೀಲರು

## ತೀರ್ಪು

ಪೊಲೀಸ್ ಆರಕ್ಷಕ ಉಪ ನಿರೀಕ್ಷಕರು, ಸಿರವಾರ ಪೊಲೀಸ್ ಠಾಣೆ ಇವರು ಆರೋಪಿ ಭಾ.ದಂ.ಸಂ. ಕಲಂ 504, 324, 325, 506 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

೨. ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

ದಿನಾಂಕ:30-12-2023 ರಂದು ಸಾಯಂಕಾಲ 5-00 ಗಂಟೆಯ ಸಮಯದಲ್ಲಿ ಸಿರವಾರ ಪೊಲೀಸ್ ಠಾಣಾ ವ್ಯಾಪ್ತಿಯ ಗಣದಿನ್ನಿ ಗ್ರಾಮದಲ್ಲಿ ಸಾಕ್ಷಿ ೧ ರವರು ಮತ್ತು ಆರೋಪಿ ಇವರ ಮನೆಗಳು ಅಕ್ಕಪಕ್ಕದಲ್ಲಿ ಇದ್ದು ಆರೋಪಿತನು ಸುಮಾರು ೧೫ ದಿನಗಳಿಂದ ಚಾಸಾ ೩ ವೀರಭದ್ರಯ್ಯನಿಗೆ ಬೈಯುತ್ತಾ ತಿರುಗಾಡುವದು ಮತ್ತು ಮಾಳಿಗೆ ಮೇಲೆ ಏರಿ ಅವರ ಮನೆಯ ಟಿನ್ ಶೀಟ್ ಗಳಿಗೆ ಕಲ್ಲು ಒಗೆಯುವದು ಮಾಡುತ್ತಿದ್ದು ಅಲ್ಲದೇ ಸಾಕ್ಷಿ ೦೧ ರಿಂದ ೦೩ ರವರು ತಮ್ಮ ಮನೆಗೆ ಓಣಿ ರಸ್ತೆಯಲ್ಲಿ ಆರೋಪಿತನ ಮನೆಯ ಮುಂದುಗಡೆ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿತನು ಸಾಕ್ಷಿ ೦೩ ರವರನ್ನು ನೋಡುತ್ತಾ ಎಲೇ ಲಂಗಾ ಸೂಳೆಮಕ್ಕಳೆ ನಿಮ್ಮನ್ನು ಒಂದು ಕೈ ನೋಡಿಕೊಳ್ಳುತ್ತೇನೆ ಯಾರು ಬರುತ್ತೀರಿ ಬರೆಲೆ ಅಂತಾ ಜಗಳ ತೆಗೆದು ಹೊಡೆಯಲು ಹೋದಾಗ ಸಾಕ್ಷಿ ೦೧ & ೦೨ ರವರು ಅಡ್ಡ ಹೋಗಿದ್ದಕ್ಕೆ ಆರೋಪಿತನು ಸಾಕ್ಷಿ ೦೧ ರವರಿಗೆ ಎಲೆ ಮುದಿಸೂಳೆ ನೀನು ಅಡ್ಡ ಬರುತ್ತೀಯೇನು ಅಂತಾ ಕಲ್ಲಿನಿಂದ ಎಡಗಾಲು ಪಾದಕ್ಕೆ ಹೊಡೆದು ಮಧ್ಯದ ಬೆರಳಿಗೆ ರಕಗಾಯಪಡಿಸಿದ್ದು, ಬಿಡಿಸಲು ಹೋದ ಸಾಕ್ಷಿ ೦೨ ರವರಿಗೆ ಆರೋಪಿತನು ಬಲಗೈ ಮುಷ್ಟಿ ಮಾಡಿ ಮೂಗಿಗೆ ಜೋರಾಗಿ ಗುದ್ದಿ ಭಾರಿ ರಕ್ತಗಾಯಗೊಳಿಸಿದ್ದು ಅಲ್ಲದೇ ಆರೋಪಿತನು ಸಾಕ್ಷಿ ೦೧ ರಿಂದ ೦೩ ರವರಿಗೆ ಮಕ್ಕಳೆ ಇವತ್ತು ಬದುಕಿದ್ದೀರಿ ಇನ್ನೊಮ್ಮೆ ನನ್ನ ಕೈಗೆ ಸಿಕ್ಕರೆ

ನಿಮ್ಮನ್ನು ಜೀವ ತೆಗೆಯುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ್ದು ಇದರಿಂದ ಆರೋಪಿತನು ಮೇಲ್ಕಂಡ ಕಲಂಗಳ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ಆರೋಪಿತನ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿರುತ್ತದೆ.

೩. ದೋಷಾರೋಪಣಾ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ಆರೋಪಿ ರವರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತನಿಖಾಧಿಕಾರಿಯು 504, 324, 325, 506 ರ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೇಯವನ್ನು ತೆಗೆದುಕೊಂಡು ಆರೋಪಿ ಗೆ ಸಮನ್ಸ್ ಜಾರಿ ಮಾಡಲಾಗಿರುತ್ತದೆ. ಆರೋಪಿತನು ನ್ಯಾಯಾಲಯಕ್ಕೆ ಹಾಜರಾದ ಮೇರೆಗೆ ಅವರಿಗೆ ಅ. ಪ್ರ.ಸಂ. ಕಲಂ 207ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲನ್ನು ಒದಗಿಸಲಾಯಿತು. ನಂತರ, ದೋಷಾರೋಪಣೆಯನ್ನು ರಚಿಸುವ ಸಲುವಾಗಿ ಉಭಯ ಪಕ್ಷಗಾರರ ವಾದವನ್ನು ಆಲಿಸಿ, ಆರೋಪಿತನ ವಿರುದ್ಧ ಭಾ.ದಂ.ಸಂ. ಕಲಂ504, 324, 325, 506 ಐ.ಪಿ.ಸಿ ರ ಅಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ, ಆರೋಪಿತನಿಗೆ ಓದಿ ಹೇಳಲಾಯಿತು. ಆರೋಪಿತನು ದೋಷಾರೋಪಣೆಯನ್ನು ಅಲ್ಲಗಳೆದು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

೪. ಅಭಿಯೋಜನೆಯವರು ತಮ್ಮ ಪರವಾಗಿ ಒಟ್ಟು 9 ಜನ ಸಾಕ್ಷಿದಾರರನ್ನು ದೋಷಾರೋಪಣಾ ಪತ್ರದಲ್ಲಿ ಉಲ್ಲೇಖಿಸಿ, ಅವರಲ್ಲಿ 9 ಜನ ಸಾಕ್ಷಿದಾರರನ್ನು ಪ್ರಾಸಾ ೧ ರಿಂದ ೯ ಎಂದು ವಿಚಾರಣೆ ಮಾಡಿಕೊಂಡು ನಿಪಿ ೧ ರಿಂದ ೯ ದಾಖಲೆಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಂತರ ಅ.ಪ್ರ.ಸಂ. ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತನು ತಮ್ಮ ವಿರುದ್ಧದ

ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯವನ್ನು ಸಂಪೂರ್ಣವಾಗಿ ಸುಳ್ಳು ಎಂದು ಅಲ್ಲಗಳೆದಿದ್ದು, ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

೫. ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

೬. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಅಂಶಗಳು ನನ್ನ ತೀರ್ಮಾನಕ್ಕೆ ಉದ್ಭವಿಸುತ್ತವೆಃ

೧) ದಿನಾಂಕ 30.12.2023 ರಂದು ಸಾಯಂಕಾಲ 5.00 ಗಂಟೆಯ ಸಮಯದಲ್ಲಿ ಸಿರವಾರ ಪೊಲೀಸ್ ಠಾಣಾ ವ್ಯಾಪ್ತಿಯ ಗಣದಿನ್ನಿ ಗ್ರಾಮದಲ್ಲಿ ಆರೋಪಿತನಾದ ಮನೆಯ ಮುಂದಿನ ರಸ್ತೆಯ ಮೇಲೆ ಚಾಸಾ೧ ರಿಂದ ೩ ರವರಿಗೆ ಎಲೇ ಲಂಗಾ ಸೂಳೆಮಕ್ಕಳೆ ನಿಮ್ಮನ್ನು ಒಂದು ಕೈ ನೋಡಿಕೊಳ್ಳುತ್ತೇನೆ ಎಂದು ಚಾಸಾ ೧ ರಿಂದ ೩ ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತುಪಡಿಸಿರುತ್ತಾರೆಯೇ?

೨) ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು, ಚಾಸಾ ೧ ರವರಿಗೆ ಕಲ್ಲಿನಿಂದ ಚಾಸಾ ೧ ರವರ ಎಡಭಾಗದ ಮೇಲೆ ಹೊಡೆದು ಮಧ್ಯದ ಬೆರಳಿಗೆ ರಕ್ತಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 324 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತುಪಡಿಸಿರುತ್ತಾರೆಯೇ?

೩) ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ ೨ ರವರ ಮೂಗಿನ ಮೇಲೆ ಬಲಗೈಯಿಂದ ಜೋರಾಗಿ ಹೊಡೆದು ಚಾಸಾ ೨ ರವರಿಗೆ ಭಾರಿ ಗಾಯಪಡಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 325 ರ

ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತುಪಡಿಸಿರುತ್ತಾರೆಯೇ?

೪) ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ ೧ ರಿಂದ ೩ ರವರಿಗೆ ಜೀವಬೆದರಿಕೆ ಹಾಕಿ, ಭಾ.ದಂ.ಸಂ. ಕಲಂ 506 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತುಪಡಿಸಿರುತ್ತಾರೆಯೇ?

೫) ಯಾವ ಆದೇಶ?

೭. ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ ೧ ರಿಂದ ೪ ಃ ನಕಾರಾತ್ಮಕವಾಗಿ

ಅಂಶ ೫ ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

***<u>ಕಾ ರ ಣ ಗ ಳು</u>***

೮. ***<u>ಅಂಶ ೧</u>*** <u>ರಿಂದ ***೪ ಃ***</u>– ಈ ಎಲ್ಲಾ ಅಂಶಗಳು ಒಂದೇ ಘಟನೆಯನ್ನು ಆದಾರಿತವಾಗಿದ್ದು ಪರಸ್ಪರ ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಎರಡೂ ಅಂಶಗಳನ್ನು ಒಟ್ಟಿಗೆ ಚರ್ಚಿಸಲು ತೆಗೆದುಕೊಳ್ಳಲಾಗಿರುತ್ತದೆ. ಅಭಿಯೋಜನೆಯವರ ಪರವಾಗಿ ಒಟ್ಟು ೬ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು ಪ್ರಾಸಾ ೧ರವರು ಫಿರ್ಯಾದುದಾರರಾಗಿದ್ದು, ಪ್ರಾಸಾ ೨ರವರು ನೊಂದ ವ್ಯಕ್ತಿಯಾಗಿರುತ್ತಾರೆ. ಹಾಗೆಯೇ, ಪ್ರಾಸಾ ೩ ಮತ್ತು ೪ರವರು

ಸಾಂದರ್ಭಿಕ ಸಾಕ್ಷಿ, ಪ್ರಾಸಾ ೬ ಮತ್ತು ೭ ರವರು  ಮಹಜರು ಸಾಕ್ಷಿ, ಪ್ರಾಸಾ ೭ ರವರು ತನಿಖಾಧಿಕಾರಿಯಾಗಿರುತ್ತಾರೆ.

೯. ಅಭಿಯೋಜನೆಯು ಮೊದಲಿಗೆ ಈ ಪ್ರಕರಣದ ಫಿರ್ಯಾದುದಾರರಾದ ಪ್ರಸಾಬ್ ಒಂದೂರ್ ಅವರನ್ನು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದಾಗ ಅವರು ಸುಮಾರು ೨ ವರ್ಷಗಳ ಹಿಂದೆ ತನಗೆ ಹಾಗೂ ಚಾಸಾ ೨ ಮತ್ತು ೩ ರವರೆಗೆ ಆರೋಪಿತನು ಆತನ ಮನೆಯ ಮುಂದೆ ಹಲ್ಲೆ ಮಾಡಿದ್ದು ಚಾಸ ೩ ರವರೆಗೆ ಎಳೆದಾಡಿ ಹೊಡೆದಿದ್ದು, ಚಾಸ ೨ ರವರೆ ಮೂಗಿನ ಮೇಲೆ ಗುದ್ದಿ. ತಮ್ಮ ಕಾಲಿಗೆ ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ ಆದರೆ ನಂತರದಲ್ಲಿ ಅವರು ನಿರ್ದಿಷ್ಟವಾಗಿ ದಿನಾಂಕ ಮತ್ತು ಸಮಯಕ್ಕೆ ಕುರಿತಂತೆ ನುಡಿಯದೇ ಇದ್ದು ಆ ವಿಚಾರಕ್ಕೆ ಕುರಿತಂತೆ ಸಹಾಯಕ ಸರ್ಕಾರಿ ವಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದಾಗ ನ್ಯಾಯಾಲಯದ ಮುಂದಿರುವ ಆರೋಪಿ ಅವರಿಗಾಗಲಿ ಅಥವಾ ಚಾಸಾ ೨ ಅಥವಾ ೩ರವರಿಗಾಗಲಿ ಯಾವುದೇ ವಸ್ತುಗಳಿಂದ ಹಲ್ಲೆ ಮಾಡಿಲ್ಲ ಎಂದು ನುಡಿದು ಅಭಿಯೋಜನೆಯ ಪ್ರಕರಣವನ್ನು ನಿರಾಕರಿಸಿರುತ್ತಾರೆ ಅದೇ ರೀತಿ ಸದರಿ ಸಾಕ್ಷಿಯು ಅಂದರೆ ದೂರುದಾರರಾದ ಪ್ರಾಸ ಒಂದೂರವರು ಅವರಿಗೆ ಹೊಡೆಯಲು ಬಳಸಿರುತ್ತಾರೆ ಎಂದು ಪೊಲೀಸರು ಅಮಾನತ್ತುಪಡಿಸಿಕೊಂಡು ಈ ನ್ಯಾಯಾಲಯದ ಮುಂದೆ ಹಾಜರಪಡಿಸಿರುವ ಕಲ್ಲನ್ನು ಗುರುತಿಸಿರುವುದಿಲ್ಲ. ಹಾಗೂ ಸದರಿ ಕಲ್ಲನ್ನು ತಾನು ಈ ಹಿಂದೆ ನೋಡಿಲ್ಲ ಎಂದು ಸಾಕ್ಷ್ಯ ನುಡಿದು ಅಭಿಯೋಜನೆಯ ಪ್ರಕರಣವನ್ನು ಸಂಪೂರ್ಣವಾಗಿ ತಿರಸ್ಕರಿಸಿರುತ್ತಾರೆ.

೧೦. ಮತ್ತೊಬ್ಬ ನೊಂದ ಸಾಕ್ಷಿಯಾದ ಪ್ರಾಸ ಎರಡೂರವರೂ ಸಹ ಅಭಿಯೋಜನೆಯ ಪ್ರಕರಣವನ್ನು ತಿರಸ್ಕರಿಸಿ ತನಗೆ ಯಾವತ್ತೂ ಆರೋಪಿ ಹಲ್ಲೆ ಮಾಡಿಲ್ಲ, ತಾನು ಬಿದ್ದು ಪೆಟ್ಟು ಮಾಡಿಕೊಂಡಿದ್ದು. ನಾನು ಈ ಕುರಿತಂತೆ ಯಾವುದೇ ದೂರನ್ನು ನೀಡಿಲ್ಲ ಮತ್ತು ಹೇಳಿಕೆಯನ್ನು ನೀಡಿಲ್ಲ ಎಂದು ನೋಡಿರುತ್ತಾರೆ. ಸದರಿ ಸಾಕ್ಷಿಯನ್ನು ಸಹ ಅಭಿಯೋಜನೆಯವರು ಪಾಠಿ ಸವಾಲಿಗೆ ಒಳಪಡಿಸಿದಾಗ ಅಭಿಯೋಜನೆ ತನ್ನ ಮುಖ್ಯ

ವಿಚಾರಣೆಯ ವಿಚಾರಕ್ಕೆ ಕುರಿತಂತೆ ಪೂರಕವಾಗಿ ಪಾಟಿ ಸವಾಲಿನಲ್ಲಿಯೂ ಸಹ ನುಡಿದು ಅಭಿಯೋಜನೆಯವರು ಆರೋಪಿತನು ಹಲ್ಲೆ ಮಾಡಿ ಹಷ್ಯಾಚು ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾನೆ ಎಂದು ನೀಡಿದ ಸಲಹೆಯನ್ನು ತಿರಸ್ಕರಿಸಿ ಅಭಿಯೋಜನೆಯ ಪ್ರಕರಣವನ್ನು ಸರಾಸಗಟ್ಟಾಗಿ ತಿರಸ್ಕರಿಸಿರುತ್ತಾನೆ.

೧೧. ಪ್ರತ್ಯಕ್ಷ ಸಾಕ್ಷಿದಾರರು ಎಂದು ಪ್ರಾಸ ೪ ಮತ್ತು ೫ ಊರವರನ್ನು ಸಾಕ್ಷಿದ್ದಾರೆ. ಸಾಬಿಯೋಜನೆಯು ತನ್ನ ಈ ಪ್ರಕರಣದಲ್ಲಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದ್ದು ಆದರೆ ವರು ತಾವು ಯಾವುದೇ ಜಗಳವನ್ನು ಬಿಡಿಸಿಲ್ಲ. ಈ ಪ್ರಕರಣವನ್ನು ಆರೋಪಿತನ ಮೇಲೆ ಏಕೆ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮತ್ತು ತಾನು ನನ್ನ ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ ಎಂದು ನುಡಿದಿದ್ದು ಪಾಟಿ ಸಹ ಸಹಾಯಕ ಸರ್ಕಾರಿ ಅವಯೋಜಕರ ಪಾಟಿ ಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣವನ್ನು ತಿರಸ್ಕರಿಸಿ ಅಭಯೋಜನೆಯ ಪ್ರಕರಣಕ್ಕೆ ಪೂರಕವಾದಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

೧೨. ಈ ಪ್ರಕರಣದ ಪಂಚಸಾಕ್ಷಿದಾರರನ್ನು ಪ್ರಾಸ ೫ ಮತ್ತು ೬ ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿತಿದ್ದು ಅವರೂ ಸಹ ದೀಪಿ ಎರಡರಲ್ಲಿ ಬರೆದಿರುವ ತಮ್ಮ ಸಹಿಗಳನ್ನು ಮಾತ್ರ ಗುರುತಿಸಿ. ತಮ್ಮ ಮುಂದೆಯ ಪೊಲೀಸರು ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿಲ್ಲ. ಯಾವುದೇ ಸ್ಥಳಪಂಚನಾಮೆಯನ್ನು ಜರುಗಿಸಿಲ್ಲ ಎಂದು ನುಡಿದು ಈ ಪ್ರಕರಣದಲ್ಲಿ ಅಮಾನತಪಡಿಸಿಕೊಂಡು ನ್ಯಾಯಾಲಯದ ಮುಂದೆ ಹಾಜು ರಾಜರುಪಡಿಸಿರುವಂತಹ ವಸ್ತುಗಳನ್ನು ತಾವು ಹಿಂದೆ ನೋಡಿಲ್ಲ ಎಂದೂ ಸಹ ನೋಡಿದು ಅಭಿಯೋಜನೆಯ ಪ್ರಕರಣವನ್ನು ತಿರಸ್ಕರಿಸಿರುತ್ತಾರೆ.

೧೩. ತನಿಕಾರಿಕಾರಿಯು ಈ ಪ್ರಕರಣದಲ್ಲಿ ಚಾಸಾ ೧ ರವರು ನೀಡಿದ ದೂರಿನ ಅನ್ವೇಯ ದೂರಿನ ಆಧಾರದ ಮೇಲೆ ಪ್ರ.ವ.ವರದಿಯನ್ನು ದಾಖಲಿಸಿದ್ದು ನಂತರ ಸ್ಥಳಮಹಜರನ್ನು ಜರುಗಿಸಿ ಕಲ್ಲನ್ನು ಅಮಾನತುಪಡಿಸಿಕೊಂಡು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದು ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ, ಆದರೆ

ಈಗಾಗಲೇ ಮೇಲೆ ವಿವರಿಸಿದಂತೆ ಪ್ರಾಸಾ ೧ ರವರು ಮತ್ತು ೧ ಸಾಕ್ಷಿದಾರರಾದ ಪ್ರಾಸಾ ೨ ರವರು ಹಾಗೂ ಸಾಂದರ್ಭಿಕ ಸಾಕ್ಷಿದಾರರಾದ ಪ್ರಾಸ ೩ ಮತ್ತು ೪ ರವರು ಅಭಿಯೋಜನೆಯಲ್ಲಿ ಉಲ್ಲೇಖಿಸಿರುವಂತಹ ಯಾವುದೇ ಘಟನೆ ನಡೆದಿಲ್ಲ ಎಂದು ನುಡಿದು ಅಭಿಯೋಜನೆಯ ಪ್ರಕರಣವನ್ನು ತಿರಸ್ಕರಿಸಿದರು. ಇದು ಕೇವಲ ತನಿಖಾಧಿಕಾರಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯು ಸದರಿ ಆರೋಪಗಳನ್ನು ಎಸಗಿರುತ್ತಾನೆ ಎಂದು ಪರಿಗಣಿಸಲು ಸೂಕ್ತವಾಗಿ ಕಂಡುಬಂದಿರುವುದಿಲ್ಲ ಅತಿಮುಖ್ಯವಾಗಿ ತನಿಖಾಧಿಕಾರಿಯು ತಾನು ಮಹಜರ್‌ನ ಅಡಿಯಲ್ಲಿ ಪಂಚರ ಸಮಕ್ಷಮ ಕಲ್ಲನ್ನು ಅಮಾನತಪಡಿಸಿಕೊಂಡಿರುತ್ತಾರೆ ಎಂದು ನುಡಿದಿದ್ದು ಆದರೆ ಪಂಚರು ಪೊಲೀಸ್ ಠಾಣೆಯಲ್ಲಿ ತಾವು ಸದರಿ ಮಹಜರಿ ಸಹಿ ಮಾಡಿದ್ದು ತಮ್ಮ ಸಮಕ್ಷಮದಲ್ಲಿ ಯಾವುದೇ ಕಲ್ಲನ್ನು ಅಮಾನತುಪಡಿಸಿಕೊಂಡಿಲ್ಲ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದು ಯೋಜನೆಯ ಪ್ರಕರಣವನ್ನು ತಿರಸ್ಕರಿಸಿರುತ್ತಾರೆ.

೧೪. ಈ ಪ್ರಕರಣದಲ್ಲಿ ಫಿರ್ಯಾದುದಾರ ಹಾಗೂ ಗಾಯಾಳು ಸಾಕ್ಷಿದಾರರಾದ ಪ್ರಾಸಾ ೧ ಮತ್ತು ೨ ರವರು ಅಭಿಯೋಜನೆಯವರಿಗೆ ಸಹಾಯವಾಗುವಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅಭಿಯೋಜನೆಯವರು ಮಾಡಿದ ಸಲಹೆಗಳನ್ನು ಪ್ರಾಸಾ ೧ರಿಂದ ೬ರವರು ನಿರಾಕರಣೆ ಮಾಡಿದ್ದು, ಮತ್ತೊಬ್ಬ ನೊಂದ ಸಾಕ್ಷಿದಾರರು ಎಂದು ಉಲ್ಲೆಕೆಸಿರುವ ಚಾಸಾ ೩ ರವರು ಮೃತ ಪಟ್ಟಿರುವುದರಿಂದ ಸದರಿ ಪ್ರಕರಣದಲ್ಲಿ ಯಾವುದೇ ನಂಬಲರ್ಹವಾದ ಸಾಕ್ಷ್ಯಗಳು ಲಭ್ಯವಿರುವುದಿಲ್ಲ. ಪ್ರಾಸಾ ೧ರವರು ನಿಪಿ ೧ ದೂರಿನಲ್ಲಿರುವ ತಮ್ಮ ಸಹಿಗಳನ್ನು ಮಾತ್ರ ಗುರ್ತಿಸಿ, ಅವುಗಳಲ್ಲಿ ಬರೆದಿರುವ ಸಂಗತಿಗಳನ್ನು ಸಹಾ ನಿರಾಕರಿಸಿರುತ್ತಾರೆ. ಸ್ವತಃ ಗಾಯಾಳು ಹಾಗೂ ಫಿರ್ಯಾದುದಾರರಾದ ಪ್ರಾಸಾ ೧ ಮತ್ತು ೨ ರವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದು ಸಾಂದರ್ಭಿಕ ಸಾಕ್ಷಿದಾರರು ಸಹ ಪ್ರತಿಕೂಲ ಸಾಕ್ಷಿದಾರರಾಗಿ ಹೊರಹೊಮ್ಮಿರುವುದರಿಂದ ಅಭಿಯೋಜನೆಯು ಆರೋಪಿಸಿದಂತೆ ಆರೋಪಿಯು ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಸಂಶಯತಿತವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯವರು

ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ತೀರ್ಮಾನಿಸಿ ಮೇಲ್ಕಂಡ ಅಂಶ ೧ ರಿಂದ ೪ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

೧೫. ***ಅಂಶ ೫ :*** ಅಂಶ ೧ ರಿಂದ ೪ ರಲ್ಲಿ ಚರ್ಚಿಸಿ ಕೊಟ್ಟ ಕಾರಣಗಳಿಗೆ ಮತ್ತು ಬಂದ ತೀರ್ಮಾನದಂತೆ, ಈ ಕೆಳಕಂಡಂತೆ ಆದೇಶವನ್ನು ಮಾಡಿರುತ್ತೇನೆ.

## ***ಆ ದೇ ಶ***

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಆರೋಪಿ ರವರು ಭಾ.ದಂ.ಸಂ. ಕಲಂ 504, 324, 325 ಮತ್ತು 506 ರ ಅಪರಾಧಗಳಿಗೆ ನಿರ್ದೋಷಿಯಾಗಿರುತ್ತಾರೆಂದು ಖುಲಾಸೆಗೊಳಿಸಲಾಗಿದೆ.

ಆರೋಪಿ ಹಾಗೂ ಅವರ ಪರವಾಗಿ ಅವರ ಜಾಮೀನುದಾರರು ಅ.ಪ್ರ.ಸಂ. ಕಲಂ 437(A) ಅಡಿಯಲ್ಲಿ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳನ್ನು ಹೊರತುಪಡಿಸಿ, ಆರೋಪಿ ಹಾಗೂ ಅವರ ಪರ ಜಾಮೀನುದಾರರು ಈ ಮೊದಲು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಈ ಪ್ರಕಟಣದಲ್ಲಿ ಠಾಣಾ ಮಾಲುಪಟ್ಟಿ ಸಂಖ್ಯೆ ೦೧(A) ದಿನಾಂಕ ೦೧.೦೧.೨೦೨೪ ರ ಅಡಿಯಲ್ಲಿ ಈ ನ್ಯಾಯಲಯದ ಮುಂದೆ ಹಾಜರು ಪಡಿಸಿರುವ ಒಂದು ಹಿಡಿ ಗಾತ್ರದ ಕಲ್ಲು ಮೌಲ್ಯರಹಿತ ವಾಗಿದ್ದು, ಮೇಲ್ಮನವಿ ಅವದಿ ಮುಗಿದ ನಂತರ ನಾಶಪಡಿಸಲು ಆದೇಶಿಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖಿಸಿ, ಅವರು ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 3ನೇ ದಿವಸ ಆಗಸ್ಟ್ ಮಾಹೆ 2026 ರಂದು ನಾನು ಘೋಷಿಸಿದ್ದೇನೆ)

(ಕಂಚಿ ಮಾಯಣ್ಣ ಗೌತಮ್)
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ; ಮಾನವಿ

***ಅ ನು ಬಂ ಧ***

***ಅಭಿಯೋಜನೆಯವರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ***

ಪ್ರಾಸಾ ೧ ಃ ಶಂಕ್ರಮ್ಮ
ಪ್ರಾಸಾ ೨ ಃ ಬೆಟ್ಟಪ್ಪ
ಪ್ರಾಸಾ ೩ ಃ ತಾಯಪ್ಪ
ಪ್ರಾಸಾ ೪ ಃ ಸಣ್ಣ ದೇವಪ್ಪ
ಪ್ರಾಸಾ ೫ ಃ ಶರಣಯ್ಯ
ಪ್ರಾಸಾ ೬ ಃ ಸೂಗಪ್ಪ
ಪ್ರಾಸಾ ೭ ಃ ಗುರುಚಂದ್ರ

***ಆರೋಪಿಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ***

- ಇಲ್ಲ –

***ಅಭಿಯೋಜನೆಯವರ ಪರವಾಗಿ ಗುರ್ತಿಸಲಾದ ದಾಖಲೆಗಳ ಪಟ್ಟಿಃ***

ನಿಪಿ ೧ ಃ ದೂರು
ನಿಪಿ ೨ ಃ ಪಂಚನಾಮ
ನಿಪಿ ೩ ಃ ಎಪ್ ಎಲ್ ವರದಿ
ನಿಪಿ ೪ ಃ ಪ್ರಾಸಾ ೨ ರವರ ಹೇಳಿಕೆ
ನಿಪಿ ೫ ಃ ಪ್ರಾಸಾ ೩ ರವರ ಹೇಳಿಕೆ
ನಿಪಿ ೬ ಃ ಪ್ರಾಸಾ ೪ ರವರ ಹೇಳಿಕೆ
ನಿಪಿ ೭ ಃ ಎಫ್ ಐ ಆರ್
ನಿಪಿ ೮ ಮತ್ತು ೯ ಃ ಗಾಯದ ಪ್ರಮಾಣ ಪತ್ರ

***ಆರೋಪಿಯ ಪರವಾಗಿ ಗುರ್ತಿಸಲಾದ ದಾಖಲೆಗಳ ಪಟ್ಟಿಃ***

– ಇಲ್ಲ –

***ಈ ಪ್ರಕರಣದಲ್ಲಿ ಗುರ್ತಿಸಲಾದ ಮುದ್ದೆ ಮಾಲುಗಳ ಪಟ್ಟಿಃ***

- ಇಲ್ಲ –

Digitally signed by K M GOUTAM
Location: Senior Civil Judge & JMFC, Manvi

(ಕಂಚಿ ಮಾಯಣ್ಣ ಗೌತಮ್)
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ; ಮಾನವಿ